ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಮಂಜೂರಾದ ಬೋಧಕಾ ಬೋಧಕೇತರ ಹುದ್ದೆಗಳು.

255 (2203) ಶ್ರೀ ಮಹಾಂತೇಶ್ ಕೌಜಲಗಿ (ಬೈಲಹೊಂಗಲ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಭೋಧಕೇತರ ಹುದ್ದೆಗಳು ಎಷ್ಟು ಮಂಜೂರಾಗಿರುವುವು? ಅವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುವುವು? ಮತ್ತು ಎಷ್ಟು ದಿನಗಳಿಂದ ಖಾಲಿ ಇರುವುವು;

ಆ) ಈ ಖಾಲಿ ಇರುವ ಹುದ್ದೆಗಳನ್ನು ಇನ್ನು ಎಷ್ಟು ದಿನಗಳಲ್ಲಿ ತುಂಬಲಾಗುವುದು;

ಇ) ಪ್ರತಿ ವರ್ಷ ಸರ್ಕಾರದವರು ಕೆ.ಎಂ.ಸಿ.ಆಸ್ಪತ್ರೆಗೆ ಎಷ್ಟು ಹಣ ಖರ್ಚು ಮಾಡುತ್ತಾರೆ; (ನೌಕರರ ವೇತನ ಹಾಗೂ ಔಷಧಿಯ ವೆಚ್ಚ ಸೇರಿ)

ಈ) ಪ್ರತಿ ವರ್ಷ ನೌಕರರ ವೆಚ್ಚಕ್ಕಾಗಿ ಎಷ್ಟು ಹಣ ಖರ್ಚಾಗುವುದು? ಹಾಗೂ ಎಷ್ಟು ಹಣ ಔಷಧಿಗಾಗಿ ಖರ್ಚಾಗುವುದು;

ಉ) ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಬಡವರಿಗೆ ಔಷಧಿ ಇಲ್ಲದೇ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದನ್ನು ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿರುತ್ತದೆ;

ಊ) ಉತ್ತರ ಕರ್ನಾಟಕ ಪ್ರತಿಷ್ಠಿತ ವೈದ್ಯಕೀಯ ಮಹಾವಿದ್ಯಾಲಯವಾದ ಕೆ.ಎಂ.ಸಿ.ಯ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರ ಯಾವ ವಿಶೇಷ ಕ್ರಮ ಕೈಗೊಂಡಿದೆ?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ)

ಮಂಜೂರಾದ ಹುದ್ದೆಗಳು		ಖಾಲಿ ಇರುವ ಹುದ್ದೆಗಳು	
ಬೋಧಕ	ಬೋಧಕೇತರ	ಬೋಧಕ	ಬೋಧಕೇತರ
347	932	160	316

ಪತ್ರಾಂಕಿತ ಹುದ್ದೆಗಳು ಕಳೆದ 15 ವರ್ಷಗಳಿಂದ ಖಾಲಿ ಇದ್ದು, 1997, 1998, 1999 ರಲ್ಲಿ 171 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಆ) 28 ಭೋಧಕರ ಹುದ್ದೆಗಳನ್ನು ಭರಿಸಲು ಜಾಹಿರಾತು ನೀಡಲಾಗಿದೆ. 'ಕ' ವರ್ಗದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) 1997-98 - 1651.47 ಲಕ್ಷ ರೂ.ಗಳು
1998-99 - 1769.22 "
1999-2000 - 1731.52 "

ಈ)	ವೇತನಕ್ಕಾಗಿ ರೂ.ಲಕ್ಷಗಳಲ್ಲಿ	ಔಷಧಿಗಾಗಿ ರೂ.ಲಕ್ಷಗಳಲ್ಲಿ
1997-98	739.84	78.91
1998-99	880.64	246.22
1999-2000	1084.00	162.12

ಉ) ಈ ಸಂಸ್ಥೆಯಲ್ಲಿ ಅವಶ್ಯಕ ಔಷಧಿಗಳ ಕೊರತೆ ಇರುವುದಿಲ್ಲ. ಸ್ವಾಯತ್ತ ಸಂಸ್ಥೆಯಾದಾಗಿನಿಂದ ಆಸ್ಪತ್ರೆಗೆ ಬೇಕಾಗುವ ದಿನನಿತ್ಯದ ಔಷಧಿಗಳನ್ನು ನಿಯಮಾನುಸಾರ ಸಾಕಷ್ಟು ಪ್ರಮಾಣದಲ್ಲಿ ಖರೀದಿಸಲಾಗುತ್ತಿದೆ. 1997-98 ರಿಂದ 1999-2000ದ ವರೆಗೆ ರೂ.4,87,24,033.00 ಮೊತ್ತವನ್ನು ಔಷಧಿಗಾಗಿ ಖರ್ಚು ಮಾಡಲಾಗಿದೆ.

ಊ) 1996-97 ರಿಂದ ಸರ್ಕಾರವು ಈ ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯನ್ನಾಗಿ ಪರಿವರ್ತಿಸಿ, ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುತ್ತಿದೆ.

(1) ಎಂ.ಸಿ.ಐ. ನಿಯಮಾನುಸಾರ 119 ಹೆಚ್ಚುವರಿ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸಲಾಗಿದೆ.

(2) 1998 ರಿಂದ ಈಚೆಗೆ ಸಂಸ್ಥೆಯ ವಿವಿಧ ವಿಭಾಗಗಳಿಗೆ ಬೇಕಾಗುವ ವಿಶೇಷ ಉಪಕರಣಗಳನ್ನು ಒಂದು ಕೋಟಿ ರೂಪಾಯಿಗಳಲ್ಲಿ ಖರೀದಿಸಲಾಗಿದೆ. ಹಾಗೂ ಇನ್ನುಳಿದ ವಿಶೇಷ ಉಪಕರಣಗಳ ಖರೀದಿ ಕುರಿತು, ಖರೀದಿ ಮಂಡಳಿಯಲ್ಲಿ ನಿರ್ಧರಿಸಲಾಗಿದ್ದು, ಸಂಸ್ಥೆಯ ಆಡಳಿತ ಮಂಡಳಿಯ ಮಂಜೂರಾತಿ ಮೇರೆಗೆ ಬರುವ ದಿನಗಳಲ್ಲಿ ಖರೀದಿಸಲಾಗುವುದು.

(3) ಸಂಸ್ಥೆಯು ಅಭಿವೃದ್ಧಿ ಕಾರ್ಯ ಕುರಿತು ಕೇಂದ್ರ ಗ್ರಂಥಾಲಯ ಸ್ನಾತಕೋತ್ತರ ವಿದ್ಯಾರ್ಥಿ ವಸತಿನಿಲಯ, ಬರ್ನ್ಸ್ ವಾರ್ಡ್ ಫಿಜಿಯೋಥೆರಪಿ, ಇನ್‌ಪೆಕ್ಷಿಯನ್ ಆಸ್ಪತ್ರೆ, ಒಳಗೊಂಡಂತೆ ಕಿಮ್ಸ್ ಆಸ್ಪತ್ರೆ, ರೂ.ಮೂರು ಕೋಟಿ ಅಂದಾಜು ವೆಚ್ಚದಲ್ಲಿ ಕಟ್ಟಡಗಳ ನಿರ್ಮಾಣ ಕೈಗೊಳ್ಳಲಾಗಿದೆ. ಅಲ್ಲದೆ ಸಂಸ್ಥೆಯ ಇದ್ದ ಕಟ್ಟಡಗಳ ದುರಸ್ತಿ ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಮಹಾಂತೇಶ್ ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಒಟ್ಟು ಬೋಧಕ, ಬೋಧಕೇತರ ಹುದ್ದೆಗಳಲ್ಲಿ ಸುಮಾರು 476 ಹುದ್ದೆಗಳು ಕಳೆದ 15 ವರ್ಷಗಳಿಂದ ಖಾಲಿ ಇವೆ ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಈ ಹುದ್ದೆಗಳನ್ನು ಯಾವಾಗ ತುಂಬಿಕೊಳ್ಳಲಾಗುವುದು? ಮತ್ತು ಈ ಆಸ್ಪತ್ರೆಯಲ್ಲಿ ಔಷಧಿಗಳ ಕೊರತೆ ಇಲ್ಲವೆಂದು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ಈ ಒಂದು ಆಸ್ಪತ್ರೆಗೆ ಯಾರಾದರು ಹೋಗಿ ಔಷಧಿಯನ್ನು ಪಡೆದುಕೊಂಡರೆ ನಿಜವಾಗಿಯೂ ಅವರು ಪುಣ್ಯವಂತರು ಎನ್ನುವುದು ನನ್ನ ಭಾವನೆಯಾಗಿದೆ. ಏಕೆಂದರೆ, ಈ ಆಸ್ಪತ್ರೆಗೆ ಯಾರು ಹೋಗುತ್ತಾರೆ ಅವರಿಗೆ ಇವತ್ತಿನ ದಿವಸ ಔಷಧಿ ಸಿಗುವುದಿಲ್ಲ. ಹಾಗೆಯೆ, ಈ ಒಂದು ಸಂಸ್ಥೆಯನ್ನು ಸ್ವಾಯತ್ತ ಸಂಸ್ಥೆಯಾಗಿ ಪರಿವರ್ತಿಸಿದ ನಂತರ ಈ ಒಂದು ಸಂಸ್ಥೆಯಲ್ಲಿ ಏನಾದರೂ ಅಭಿವೃದ್ಧಿಯಾಗಿದೆಯೇ? ಇದರ ಬಗ್ಗೆ ಮಾನ್ಯ ಮಂತ್ರಿಗಳು ದಯವಿಟ್ಟು ಉತ್ತರ ಕೊಡಬೇಕು.

ಶ್ರೀಮತಿ ನಫೀಸ್ ಫಜಲ್ : 1997 ರಿಂದ 1999 ರವರೆಗೆ 171 ಹುದ್ದೆಗಳಲ್ಲಿ ಲೆಕ್ಚರರ್ ಹಾಗೂ ಅಸಿಸ್ಟೆಂಟ್ ಪ್ರೊಫೆಸರ್‌ಗಳನ್ನು ಮತ್ತು ಪ್ರೊಫೆಸರ್ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಈಗ 160 ಖಾಲಿ ಹುದ್ದೆಗಳಿವೆ, ಇದರಲ್ಲಿ 28 ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಜಾಹೀರಾತನ್ನು ಕೊಟ್ಟಿದ್ದು, ಇದನ್ನು ಶೀಘ್ರವಾಗಿ ನಾವು ತುಂಬಿಕೊಳ್ಳುತ್ತೇವೆ. ಇನ್ನು 132 ಹುದ್ದೆಗಳು ಹಾಗೆಯೇ ಖಾಲಿ ಇರುತ್ತವೆ. ಏಕೆಂದರೆ, those posts are required for superspeciality services for providing the infrastructure. ಮಾನ್ಯ ಸದಸ್ಯರು ಈ ಆಸ್ಪತ್ರೆಯಲ್ಲಿ ಔಷಧಿಗಳು ಸಿಗುತ್ತಿಲ್ಲವೆಂದು ಪ್ರಸ್ತಾಪ ಮಾಡಿದರು. ನಾನು ಈ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ಮಾಡಿದ್ದೇನೆ. ಈಗ ಅಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಬಡವರಿಗೆ ಅಲ್ಲಿ ಎಲ್ಲಾ ರೀತಿಯಾದ ಔಷಧಿಗಳು ಮತ್ತು ಎಕ್ಸರೆ ಸೌಲಭ್ಯಗಳನ್ನು ಏರ್ಪಾಡು ಮಾಡಿಕೊಟ್ಟಿದ್ದೇವೆ. ಈ ಆಸ್ಪತ್ರೆಯ ಸುಧಾರಣೆಗೋಸ್ಕರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗ ನಾವು on honorarium we are negotiating with Neuro Surgeons and Cardiologists. ಏಕೆಂದರೆ ಅಲ್ಲಿ ನ್ಯೂರೂಸರ್ಜನ್ಸ್ ಮತ್ತು ಕಾರ್ಡಿಯಾಲಜಿಸ್ಟ್ ತಜ್ಞರು ಇರಲಿಲ್ಲ, ಇದು ತಮಗೂ ಸಹ ಗೊತ್ತಿತ್ತು. ಹಾನರೇರಿಯಮ್ ಮೋಸ್ಟ್ ತೆಗೆದುಕೊಳ್ಳುವುದಕ್ಕೆ ನೆಗೊಶಿಏಷನ್ ನಡೆಯುತ್ತಿದೆ. ಹಿಂದೆ ಡಯಾಲಿಸಿಸ್ ಮೆಷಿನ್ ಕೆಲಸ ಮಾಡುತ್ತಿರಲಿಲ್ಲ, ಆದರೆ ಈಗ ಅದು ಕೆಲಸ ಮಾಡುತ್ತಿದೆ. Finland Thermo-Project ನಿಂದ 100 ಕೋಟಿ ರೂಪಾಯಿಗಳಷ್ಟು ಸಾಲ ಸಿಗುತ್ತಿದೆ. This is under soft loan. ಇದನ್ನು ಕೇಂದ್ರ ಸರ್ಕಾರದ ಅನುಮತಿಗಾಗಿ ಇಟ್ಟಿದ್ದೇವೆ. ಮತ್ತೆ ಶೀಘ್ರವಾಗಿ ಸಿ.ಟಿ.ಸ್ಕ್ಯಾನಿಂಗ್ ಮಿಷಿನ್‌ನ್ನು ನಾವು ಕೊಂಡುಕೊಳ್ಳುತ್ತೇವೆ ಮತ್ತೆ ಟ್ರೌಮಾ ಸೆಂಟರ್‌ನ್ನು ಮಾಡ್ರನೈಜ್ ಮಾಡುತ್ತೇವೆ. ಹಿಂದೆ ಈ ಆಸ್ಪತ್ರೆಯಲ್ಲಿ ಎರಡು ಆಂಬ್ಯುಲೆನ್ಸ್ ಮಾತ್ರ ಇತ್ತು. ಪ್ರತಿದಿವಸ ಐದಾರು ಅಪಘಾತಗಳು ಇಲ್ಲಿ ಆಗುತ್ತಿತ್ತು, ಇದು ತಮಗೂ ಸಹ ಗೊತ್ತಿದೆ. ಆದ್ದರಿಂದ ಈಗ ಅಲ್ಲಿ ನಾಲ್ಕು ಆಂಬ್ಯುಲನ್ಸ್ ವ್ಯಾನ್‌ಗಳಿವೆ. ಇಷ್ಟೆಲ್ಲಾ ಸುಧಾರಣೆಯನ್ನು ನಾವು ಬಂದ ಮೇಲೆ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕಿಮ್ಸ್ ಆಸ್ಪತ್ರೆ ನಮ್ಮ ಉತ್ತರ ಕರ್ನಾಟಕದಲ್ಲಿ ಎಲ್ಲಾ ಜನರಿಗೆ ಬೇಕಾದಂಥ ಆಸ್ಪತ್ರೆಯಾಗಿದೆ. ಇಲ್ಲಿರುವ ಹುದ್ದೆಗಳನ್ನು ತುಂಬಿಕೊಳ್ಳಲಿಕ್ಕೆ 15 ವರ್ಷದಿಂದ ಪ್ರಯತ್ನವನ್ನು ಮಾಡಲಿಲ್ಲ, ಈಗ ಸ್ವಲ್ಪ ಪ್ರಯತ್ನವನ್ನು ಮಾಡುತ್ತಿದ್ದೇನೆಂದು ಹೇಳುತ್ತಿದ್ದಾರೆ, ಇದು ಎಷ್ಟು ತೀವ್ರ ಗತಿಯಿಂದ ಆಗಬೇಕಾಗಿತ್ತು ಅಷ್ಟು ಆಗಲಿಲ್ಲ. ಮತ್ತೊಂದು ಪ್ರಮುಖವಾದದ್ದು ನ್ಯೂರೋ ಸರ್ಜನ್ ಇದು ಬಹಳ ವರ್ಷದಿಂದ ಬೇಡಿಕೆ ಇದೆ. ಹುಬ್ಬಳ್ಳಿ ನಗರ ನ್ಯಾಶನಲ್ ಹೈವೇ ಮೇಲೆ ಬರುತ್ತದೆ. ಉತ್ತರ ಕರ್ನಾಟಕ ಬೇರೆ ಬೇರೆ ಜಿಲ್ಲೆಗಳಿಂದ ಅಲ್ಲಿಗೆ ಬರುತ್ತಾರೆ. ಇಲ್ಲಿ ನ್ಯೂರೋ ಸರ್ಜನ್ ಇಲ್ಲದಿದ್ದಕ್ಕೆ ಎಕ್ಸಿಡೆಂಟ್ ಕೇಸ್‌ಗಳಿಗೆ ಪ್ರಾಥಮಿಕವಾದ ಚಿಕಿತ್ಸೆಯನ್ನು ಮಾಡಿ ನಂತರ ಪ್ರೈವೇಟ್ ಆಸ್ಪತ್ರೆಗಳಿಗೆ ಕಳುಹಿಸುವಂಥ ಒಂದು ವ್ಯವಸ್ಥೆ ಇದೆ. ಉತ್ತರ ಕರ್ನಾಟಕದಲ್ಲಿ ಇದೊಂದು ದೊಡ್ಡ ಆಸ್ಪತ್ರೆ ಇರುವುದು. ಅಲ್ಲಿ ನ್ಯೂರೋ ಸರ್ಜನ್ ಇಲ್ಲದ್ದಕ್ಕೆ ಬೇರೆ ಕಡೆ ಕಳುಹಿಸುವದಾಗುತ್ತದೆ. ಕಾರ್ಡಿಯಾಲಾಜಿಸ್ಟ್ ಇಲ್ಲದ್ದಕ್ಕೆ ಅದಕ್ಕೂ ಕೂಡ ಬೇರೆ ಕಡೆ ರೆಫರ್ ಮಾಡುವಂಥದ್ದು ಇದೆ.

ಇದರ ಬಗ್ಗೆ ತೀವ್ರವಾದಂಥ ಕ್ರಮವನ್ನು ತೆಗೆದುಕೊಂಡು ನ್ಯೂರೋ ಸರ್ಜನ್ ನೇಮಕಾತಿ ಮಾಡಿಕೊಳ್ಳುವಂಥದ್ದು ಆಗಬೇಕು. ಆಡಳಿತ ಸುಧಾರಣೆ ಮತ್ತು ಔಷಧಿ ಕೊರತೆ, ಮಾನ್ಯ ಕೌಜಲಗಿಯವರು ಹೇಳಿದಂತೆ ಔಷಧಿ ಕೊರತೆ ಆಗಾಗ ಆಗುತ್ತದೆ, ಅದನ್ನು ಸರಿಪಡಿಸುವಂಥದ್ದು ಆಗಬೇಕು. ಕೆಲವೊಂದು ಕನ್‌ಸ್ಟ್ರಕ್ಷನ್ ವರ್ಕ್ಸ್ ನಡೆದಿರುತ್ತದೆ, ಇದರಲ್ಲಿ ಸರಿಯಾದ ಕೆಲಸ ನಡೆಯುತ್ತಿಲ್ಲ, ಅದರಲ್ಲಿ ಅಕ್ರಮ ಅವ್ಯವಹಾರ ನಡೆಯುತ್ತಿದೆ ಎನ್ನುವಂಥಾದ್ದು ಜನರಿಂದ ಕಂಪ್ಲೇಂಟ್ಸ್ ಬರುತ್ತಿವೆ. ನಾವು ಇದರ ಬಗ್ಗೆ ಇನ್ಸ್‌ಪೆಕ್ಷನ್ ಮಾಡಿ ನೋಡಿದಾಗ ಸರಿಯಾಗಿ ಕಾಮಗಾರಿ ನಡೆಯುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಗಮನವನ್ನು ಹರಿಸಬೇಕು, ಈ ಆಸ್ಪತ್ರೆ ಸುಧಾರಣೆಯಾದರೆ ನಮ್ಮ ಉತ್ತರ ಕರ್ನಾಟಕಕ್ಕೆ ಒಂದು ಒಳ್ಳೆಯದಾಗುತ್ತದೆ, ಮತ್ತೆ ಅಲ್ಲಿಯ ಜನರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಗಂಭೀರವಾದ ಚಿಂತನೆ ಆಗಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀಮತಿ ನಫೀಜ್ ಫಜಲ್ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿರುವ ಕಿಮ್ಸ್ ಆಸ್ಪತ್ರೆ ಇದೊಂದು ಟೀಚಿಂಗ್ ಆಸ್ಪತ್ರೆಯಾಗಿದೆ. This is a prestigious institution for the whole of karnataka. ಇದರ ಬಗ್ಗೆ ಎಲ್ಲರಿಗೂ ಗೊತ್ತಿದೆ. ನಾನು ಸ್ವತಃ ಹೇಳಿದ್ದೇನೆ ಹುಬ್ಬಳಿಯಲ್ಲಿರುವ ಕಿಮ್ಸ್ ಆಸ್ಪತ್ರೆಯಲ್ಲಿ ನ್ಯೂರೋ ಸರ್ಜನ್ ಇಲ್ಲ, ಕಾರ್ಡಿಯಾಲಾಜಿಸ್ಟ್ ಇಲ್ಲ, ಅದಕ್ಕಾಗಿ ಅಲ್ಲಿರುವ ವೈದ್ಯರಿಂದ ನಾವು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಹಾಗೂ ಗೌರವಧನದ ಆಧಾರದ ಮೇಲೆ ತೆಗೆದುಕೊಳ್ಳಲಿಕ್ಕೆ ಕಳಿದ ಎರಡು ತಿಂಗಳುಗಳ ಹಿಂದೆ (Governing Council) ಮೀಟಿಂಗ್‌ನಲ್ಲಿ ತೀರ್ಮಾನವನ್ನು ಮಾಡಿದ್ದೇವೆ. ಅಲ್ಲಿ ನ್ಯೂರೋ ಸರ್ಜನ್ ಸಿಗುತ್ತಿಲ್ಲ, ಲೆಪ್ರೊಲಾಜಿಸ್ಟ್ ಸಿಗುತ್ತಿಲ್ಲ. ಅದಕ್ಕಾಗಿ ನಾವು ಅಲ್ಲಿ ಏನು ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಜಾಹಿರಾತು ಕೊಟ್ಟಿದ್ದೇವೆ ಅದಕ್ಕಾಗಿ ನಾವು ಗೌರವಧನದ ಆಧಾರದ ಮೇಲೆ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಗಮನಕ್ಕೆ ಬಹಳ ವಿಚಾರಗಳನ್ನು ತಂದಿದ್ದಾರೆ, ಅಲ್ಲಿ ಏನೇನು ಕೊರತೆ ಇದೆ ಅದನ್ನು ನಾವು ಪೂರೈಸುತ್ತೇವೆ. ನಾಮಿ ಅಧಿವೇಶನ ಮುಗಿದ ನಂತರ ಅಲ್ಲಿ ಭೇಟಿ ನೀಡಿ ಅಲ್ಲಿ ಏನೇನು ಕೊರತೆ ಇದೆ, ಅವರ ಜೊತೆ ನಾನು ಸಹಕರಿಸಿ ಅವರ ಸಹಾಯವನ್ನು ತೆಗೆದುಕೊಂಡು ನಾನು ಎಲ್ಲವನ್ನೂ ಸರಿಪಡಿಸುತ್ತೇನೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕಿಮ್ಸ್ ಆಸ್ಪತ್ರೆ ಕರ್ನಾಟಕದಲ್ಲಿರುವ ಒಂದು ಮಹತ್ವದ ಆಸ್ಪತ್ರೆ ಎಂದು ಹೇಳಿದರು. ಅವರು ಇದನ್ನು ಒಪ್ಪಿಕೊಂಡಿದ್ದಾರೆ. ಆದರೆ ಉತ್ತರ ಕರ್ನಾಟಕದ ಬಹಳ ಜಿಲ್ಲೆಗಳಿಗೆ ಇದೊಂದು ಮಹತ್ವದ ಆಸ್ಪತ್ರೆಯಾಗಿದ್ದು, ಅಲ್ಲಿ ಬಹಳಷ್ಟು ಹುದ್ದೆಗಳ ಕೊರತೆ ಇದೆ. ಬಹುಶಃ ಈ ಹುದ್ದೆಗಳ ಕೊರತೆಯನ್ನು ನೋಡಿದರೆ ಉತ್ತರ ಕರ್ನಾಟಕಕ್ಕೆ ಎಷ್ಟು ಅಲಕ್ಷ್ಯವಾಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಮಂಜೂರಾದ ಒಟ್ಟು ಬೋಧಕರಾದ ಹುದ್ದೆಗಳು 347, ಅದರಲ್ಲಿ 165 ಜನ ಮಾತ್ರ ಇದ್ದಾರೆ; ಬೋಧಕೇತರ 932 ಹುದ್ದೆಗಳಲ್ಲಿ 316 ಜನ ಮಾತ್ರ ಇದ್ದಾರೆ, ಬೋಧಕರ ಕೊರತೆಯಲ್ಲಿ ಶೇಕಡಾ 50 ಕೊರತೆ ಇದೆ. ಬೋಧಕೇತರ ಹುದ್ದೆಗಳಲ್ಲಿ 60 ಪರ್ಸೆಂಟ್ ಕೊರತೆ ಇದೆ. ಈ ಪ್ರಕಾರ ಹುದ್ದೆಗಳ ಕೊರತೆಯನ್ನು ನೋಡಿದರೆ ಉತ್ತರ ಕರ್ನಾಟಕದ ಈ ಮಹತ್ವದ ಕಿಮ್ಸ್ ಆಸ್ಪತ್ರೆ ಬಗ್ಗೆ, ಸರ್ಕಾರ ಎಷ್ಟು ನಿರ್ಲಕ್ಷ್ಯ ಮಾಡುತ್ತಿದೆ ಎನ್ನುವುದು ಕಾಣುತ್ತದೆ.

M.R.SPEAKER : We have already exceeded more than one hour ಇನ್ನು ಎರಡು ಮೂರು ಪ್ರಶ್ನೆಗಳಿವೆ. ಬ್ರೀಫ್ ಆಗಿ ಪ್ರಶ್ನೆಯನ್ನು ಕೇಳಬೇಕು. ಅವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ : ಆ ದೃಷ್ಟಿಯಿಂದ ಈ ಪೂರ್ಣಪ್ರಮಾಣದ ಹುದ್ದೆಗಳನ್ನು ಎಷ್ಟು ದಿವಸಗಳಲ್ಲಿ ತುಂಬುತ್ತೀರಿ? ಇದು ಬಹಳ ಮುಖ್ಯವಾದದ್ದು. ಔಷಧಿಗಳ ಕೊರತೆಯಾಗದಂತೆ ಯಾವ ರೀತಿಯಾಗಿ ನೋಡಿಕೊಳ್ಳುತ್ತೀರಿ? ಯಾವ ಯಾವ ತಜ್ಞರುಗಳು ಇಲ್ಲ, ಅವರುಗಳನ್ನು ನೇಮಕ ಮಾಡಿಕೊಳ್ಳಲು ಎಷ್ಟು ದಿವಸಗಳಲ್ಲಿ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೀರಿ ಈ ಪ್ರಶ್ನೆಗಳಿಗೆ ಉತ್ತರ ಹೇಳಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀಮತಿ ನಫೀಜ್ ಫಜಲ್ : ಮಾನ್ಯ ಅಧ್ಯಕ್ಷರೆ, ನಾನು ಇದಕ್ಕೂ ಮುಂಚೆಯೇ ಇದರ ಬಗ್ಗೆ ವಿವರಣೆಯನ್ನು ಮಾಡಿರುತ್ತೇನೆ. ಮಾನ್ಯ ಸದಸ್ಯರು ಅದರ ಬಗ್ಗೆ ಅರ್ಥಮಾಡಿಕೊಳ್ಳಲಿಲ್ಲ. 316 ಬೋಧಕೇತರ ಹುದ್ದೆಗಳು ಇರುವುದರಿಂದ, ಇದನ್ನು ನಾವು ಪೂರ್ತಿ ತುಂಬುವುದಕ್ಕಾಗುವುದಿಲ್ಲ. We have made soje provision for superspeciality courses. ಇನ್‌ಫ್ರಾಸ್ಟ್ರಕ್ಚರ್ ಇನ್ನು ತಯಾರಾಗಿರುವುದಿಲ್ಲ. 171 ಹುದ್ದೆಗಳನ್ನು ಮೂರು ವರ್ಷಗಳಲ್ಲಿ ನಾವು ತುಂಬಿದ್ದೇವೆ.

ಶ್ರೀ ಜೆ.ಟಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಬೋಧಕರ ಹುದ್ದೆಗಳ ನೇಮಕಾತಿಯಲ್ಲಿ ಬಹಳ ಅವ್ಯವಹಾರ ಆಗಿದೆ. ಯಾರು ಅರ್ಹತೆಯನ್ನು ಹೊಂದಿದವರು ಇದ್ದರು ಅವರನ್ನು ಬಿಟ್ಟು ಅರ್ಹತೆ ಇಲ್ಲದವರನ್ನು ಅಲ್ಲಿಯ ನಿರ್ದೇಶಕರು ನೇಮಕಾತಿಯನ್ನು ಮಾಡಿಕೊಂಡಿರುತ್ತಾರೆ. ದಯಮಾಡಿ ಇದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಫೀಸ್ ಫಜಲ್ : ಮಾನ್ಯ ಸದಸ್ಯರು ಹೇಳಿದ್ದು ನನ್ನ ಗಮನಕ್ಕೆ ಬಂದಿರುತ್ತದೆ. ಅದನ್ನು ನಾನು ಪರಿಶೀಲನೆ ಮಾಡಿ ಸರಿಪಡಿಸುತ್ತೇನೆ.

ಶ್ರೀ ಬಿ.ಆರ್.ಯಾವಗಲ್ : ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ ಪ್ರತಿಷ್ಟೆಯ ಸಂಸ್ಥೆ ಎಂದು ಹೇಳಿದರು. ಇಲ್ಲಿ ಯಾವುದೇ ರೀತಿಯಾದಂಥ ಸೂಪರ್ ಸ್ಪೆಶಾಲಿಟಿ ಇರುವುದಿಲ್ಲ. ಇಲ್ಲಿ ಒಬ್ಬ ಯಾವುದಾದರೂ ರೋಗಿ ತುರ್ತು ಚಿಕಿತ್ಸೆ ಬೇಕೆಂದರೆ, ಬೆಳಗಾಂ, ಬೆಂಗಳೂರು ಅಥವಾ ಬೆಂಗಳೂರಿನ ದೂರದ ಆಸ್ಪತ್ರೆಗಳಿಗೆ ಹೋಗಬೇಕಾದ ಪರಿಸ್ಥಿತಿ ಇದೆ. ಅವರು ಹೋಗುವುದರೊಳಗಾಗಿ ಆ ರೋಗಿಯು ತನ್ನ ಪ್ರಾಣವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ಕೂಡ ಇವತ್ತು ಇದೆ. ಅದಕ್ಕಾಗಿ ಮಾನ್ಯ ಸಚಿವರು ಇನ್ನು ಎಷ್ಟು ದಿನಗಳಲ್ಲಿ ಈ ಸೂಪರ್ ಸ್ಪೆಶಾಲಿಟಿ ವಿಭಾಗವನ್ನು ಕಿಮ್ಸ್‌ನಲ್ಲಿ ಯಾವಾಗ ಪ್ರಾರಂಭ ಮಾಡುತ್ತೀರೆಂದು ಹೇಳಬೇಕು.

ಶ್ರೀಮತಿ ನಫೀಸ್ ಫಜಲ್ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ, ನಾವು ಫಿನ್‌ಲ್ಯಾಂಡ್‌ದಿಂದ ಲೋನ್ ತೆಗೆದುಕೊಳ್ಳುತ್ತಿದ್ದೇವೆ, ಪುನಃ ಪುನಃ ಅದೇ ಪ್ರಶ್ನೆಯನ್ನು

ಹಾಕುತ್ತಾರೆ. ಅದು ಆದತಕ್ಷಣ ನಾವು ಸಿಟಿ ಸ್ಕ್ಯಾನ್‌ಗೆ ಏರ್ಪಾಡು ಮಾಡುತ್ತೇವೆ. ಟ್ರೋಮಾ ಸೆಂಟರ್ ಅಪ್‌ಗ್ರೇಡ್ ಮಾಡುತ್ತೇವೆ. ನಮಗೆ ಗೊತ್ತಿದೆ ಆ ನ್ಯಾಷನಲ್ ಹೈವೇಯಲ್ಲಿ ತುಂಬಾ ಅಪಘಾತಗಳಾಗುತ್ತವೆ. ಇದರ ಬಗ್ಗೆ ನಮಗೆ ಗಮನಕ್ಕೆ ಬಂದಿದೆ. ಇದನ್ನು ಸರಿಪಡಿಸಲು ಸುಮಾರು ಒಂದು ವರ್ಷವಾಗಬಹುದು.

ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

243 (2328) ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸಡಲಗ) : ಮಾನ್ಯ ಗ್ರಾಮೋಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನ ಬೆಡಕಿಹಾಳ ಶಮನ್‌ವಾಡಿ ಗ್ರಾಮಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ದೊರಕಿದೆಯೆ: ಇದರ ಯೋಜನೆಯ ಒಟ್ಟು ವೆಚ್ಚ ಎಷ್ಟು;

ಆ) ಈ ಕಾಮಗಾರಿ ಕೆಲಸವು ಪೂರ್ಣವಾಗದಿರುವುದಕ್ಕೆ ಕಾರಣಗಳೇನು: ಈ ಯೋಜನಾ ಕಾಮಾಗಾರಿ ಕೆಲಸವು ಪ್ರಾರಂಭದಿಂದಲೂ ಕಳಪೆಮಟ್ಟದ್ದು ಆಗಿರುವುದು ನಿಜವೇ:ನಿಜವಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ;

ಇ) ಈ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿ ಬೆಡಕಿಹಾಳ ಶಮನ್‌ವಾಡಿ ಗ್ರಾಮಕ್ಕೆ ನೀರನ್ನು ಎಂದು ಪೂರೈಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಬೆಡಕಿಹಾಳ್-ಶಮನ್‌ವಾಡಿ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು (ಪುನಶ್ಚೇತನ) ಯೋಜನೆಯ ರೂ.50.00 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ದಿನಾಂಕ:2-11-1995 ರಲ್ಲಿ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) ಈ ಯೋಜನೆಯನ್ನು ಕೊಳವೆನೀರು ಸರಬರಾಜು ಯೋಜನೆಗಳ ಪುನಶ್ಚೇತನ ಲೆಕ್ಕ ಶೀರ್ಷಿಕೆಯಡಿ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಮತ್ತು ಸರ್ಕಾರದಿಂದ ಬಿಡುಗಡೆಯಾದ ಹೆಚ್ಚುವರಿ ಅನುದಾನವನ್ನು ಉಪಯೋಗಿಸಿಕೊಂಡು, ಬೆಳಗಾವಿ ಜಿಲ್ಲಾ ಪಂಚಾಯತಿಯು ಹಂತಹಂತವಾಗಿ ಅನುಷ್ಠಾನಗೊಳಿಸುತ್ತಿದೆ. ಈಗಾಗಲೇ ಈ ಯೋಜನೆಯ ಮೇಲೆ ರೂ.37.68 ಲಕ್ಷ ವೆಚ್ಚವಾಗಿರುತ್ತದೆ. ಸೆಟ್ಲಿಂಗ್ ಬ್ಯಾಂಕ್‌ನ ಪ್ಲಾಸ್ಟರಿಂಗ್ ಕೆಲಸದಲ್ಲಿ ಕ್ಯೂರಿಂಗ್ ಸಾಕಷ್ಟು ಆಗದಿದ್ದುದರಿಂದ ಪ್ಲಾಸ್ಟರಿಂಗ್‌ನಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕುರಿತು ಜಿಲ್ಲಾ ಪಂಚಾಯತ್ ಸೂಕ್ತ ನಿರ್ದೇಶನ ನೀಡಿದೆ.

ಇ) ಈ ಯೋಜನೆಯನ್ನು 2000-2001ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ಮಾನ್ಯ ಅಧ್ಯಕ್ಷರೆ, ಬೆಡಕಿಹಾಳ್-ಶಮನ್‌ವಾಡಿ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ 1995 ರಲ್ಲಿ 50 ಲಕ್ಷ ರೂಪಾಯಿಗಳ